

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು-1

# 2018-19ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಾರ್ಷಿಕ ಕಾರ್ಯಸೂಚಿ :

## ಕಾರ್ಯಕ್ರಮಗಳ ವಿವರ

**ದಿನಾಂಕ: 28.05.2018 – ಶಾಲೆ ಪ್ರಾರಂಭ ಮತ್ತು ಪ್ರಾರಂಭೋತ್ಸವದ ಪೂರ್ವಸಿದ್ಧತೆ: ಮೊದಲನೆಯ ದಿನ:** 1.ಶಾಲಾ ಸ್ವಚ್ಛತೆ ಕಾರ್ಯ 2. ಎಸ್.ಡಿ.ಎಂ.ಸಿ ಸಭೆ ನಡೆಸಿ ಶಾಲಾ ಪ್ರಾರಂಭೋತ್ಸವದ ಬಗ್ಗೆ ಚರ್ಚೆ ಮಾಡುವುದು 3. ಈಗಾಗಲೇ ಸಿದ್ಧಪಡಿಸಿರುವ ಕೆಳಗೆ ನಮೂದಿಸಿರುವ ಶಾಲಾ ದಾಖಲೆಗಳ ಜೋಡಣೆ/ಪ್ರದರ್ಶನ 4. ಶಾಲಾ ವೇಳಾಪಟ್ಟಿ. 5. ಶಿಕ್ಷಕರ ವೇಳಾಪಟ್ಟಿ(ತರಗತಿವಾರು, ಶಿಕ್ಷಕರವಾರು) 6. ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸುವುದು 7. ಶಾಲಾ ಪಂಚಾಂಗ 8. ಕಡ್ಡಾಯವಾಗಿ ಎಲ್ಲಾ ಶಿಕ್ಷಕರು, ಮುಖ್ಯಶಿಕ್ಷಕರು ಪಾಲ್ಗೊಳ್ಳುವುದು ಮತ್ತು ಪ್ರಾರಂಭೋತ್ಸವಕ್ಕೆ ಪೂರ್ವತಯಾರಿ ಮಾಡಿಕೊಳ್ಳುವುದು.

**ಮುಖ್ಯಶಿಕ್ಷಕರು ತರಗತಿಯ ಶಿಕ್ಷಕರನ್ನು ನೇಮಿಸುವುದು:** 1. ಪ್ರಸ್ತುತ ವರ್ಷದಲ್ಲಿ ಹಿಂದಿನ ತರಗತಿಗಳಿಂದ ಉತ್ತೀರ್ಣರಾಗಿರುವ ಮಕ್ಕಳ ಹಾಜರಾತಿ ವಹಿಗಳನ್ನು(Students Attendance Register)ಸಿದ್ಧಪಡಿಸುವುದು 2. ಶಿಕ್ಷಕ/ಶಿಕ್ಷಕಿಯರು ತಮ್ಮ ಶೈಕ್ಷಣಿಕ ದಾಖಲೆಗಳಾದ ವಾರ್ಷಿಕ ಕಾರ್ಯ ಯೋಜನೆ, ಪಾಠಯೋಜನೆಗಳಿಗೆ, ಮುಖ್ಯಶಿಕ್ಷಕರಿಂದ ಅನುಮೋದನೆ ಪಡೆದುಕೊಳ್ಳುವುದು 3. ಮುಖ್ಯಶಿಕ್ಷಕರು ಸಹಶಿಕ್ಷಕರೊಡಗೂಡಿ ಸಮುದಾಯದ ಸಹಭಾಗಿತ್ವದೊಂದಿಗೆ ಶಾಲಾ ಪ್ರಾರಂಭೋತ್ಸವಕ್ಕೆ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳುವುದು 4. ಸಮುದಾಯದೊಂದಿಗೆ ಸೇರಿ ಜಾಥಾ ಮಾಡಿ ಮಾರನೆಯ ದಿನವೇ ಅಂದರೆ 29.05.2018 ರಂದೇ ಮಕ್ಕಳು ಶಾಲೆಗೆ ಬರಲು ಅರಿವು ಮೂಡಿಸುವುದರ ಜೊತೆಗೆ ಪೋಷಕರನ್ನು ಶಾಲಾ ಪ್ರಾರಂಭೋತ್ಸವಕ್ಕೆ ಆಹ್ವಾನಿಸುವುದು.

**ದಿನಾಂಕ: 29.05.2018 : ಶಾಲಾ ಪ್ರಾರಂಭೋತ್ಸವ :** (Well begun is half done) ಶಾಲಾ ಪ್ರಾರಂಭೋತ್ಸವವನ್ನು ಒಂದು ಯಾಂತ್ರಿಕ ಪ್ರಕ್ರಿಯೆ ಎಂದು ಪರಿಗಣಿಸದೆ ಅತ್ಯಂತ ಉತ್ಸಾಹದಿಂದ ಮುಖ್ಯಶಿಕ್ಷಕರು, ಸಹಶಿಕ್ಷಕರು, ಎಸ್.ಡಿ.ಎಂ.ಸಿ ಹಾಗೂ ಪೋಷಕರು ಸೇರಿ ಶಾಲಾ ಮಕ್ಕಳನ್ನು, ಗಣ್ಯ ಅತಿಥಿಗಳನ್ನು ಸ್ವಾಗತಿಸುವ ರೀತಿಯಲ್ಲಿ ವಿಶೇಷವಾಗಿ ಸ್ವಾಗತಿಸುವುದು. 1. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಭೌತಿಕ ವಾತಾವರಣವನ್ನು ಆಕರ್ಷಣೀಯವಾಗಿರಿಸುವುದು 2. ಮೊದಲ ಎರಡು ಅವಧಿಗಳಲ್ಲಿ ಮಕ್ಕಳನ್ನು ಆಹ್ವಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಮೂರನೆಯ ಅವಧಿಯಿಂದಲೇ ಹಾಜರಾಗಿರುವ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸುವುದು. ಹಾಜರಾಗದಿರುವ ಮಕ್ಕಳನ್ನು ಶಾಲೆಗೆ ಕರೆತರುವಂತೆ ಹಾಜರಾಗಿರುವ ಮಕ್ಕಳನ್ನು ಪ್ರೇರೇಪಿಸುವುದು 3. ಮೊದಲನೆಯ ದಿನದಿಂದಲೇ ಪಾಠ ಪ್ರವಚನಗಳನ್ನು ಆರಂಭಿಸುವುದು. ಈ ಮಾಹಿತಿ ಮಕ್ಕಳಿಗೆ ಮತ್ತು ಪೋಷಕರಿಗೆ ತಲುಪುವಂತೆ ಮಾಡುವುದು 4. ಮಧ್ಯಾಹ್ನ ಸಿಹಿಯೊಂದಿಗೆ ಅಕ್ಷರ ದಾಸೋಹದ ಊಟದ ಕಾರ್ಯಕ್ರಮವನ್ನು ಆಕರ್ಷಣೀಯಗೊಳಿಸುವುದು 5. ಸರ್ಕಾರಿ ಉತ್ತೇಜಕಗಳಾದ ಪಠ್ಯಪುಸ್ತಕ, ಸಮವಸ್ತ್ರ, ಇತ್ಯಾದಿ ಸಂಗ್ರಹಿಸಿ ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಗಣ್ಯರ ಸಮ್ಮುಖದಲ್ಲಿ ವಿತರಿಸುವುದು. **ವಿ.ಸೂ: ಎಲ್ಲಾ ಶಿಕ್ಷಕ/ಶಿಕ್ಷಕಿಯರು ಪ್ರಾರಂಭೋತ್ಸವದ ಕಾರ್ಯಕ್ರಮವನ್ನು ತಮ್ಮ ಪಾಠ ಪ್ರವಚನಗಳನ್ನು ಆರಂಭಿಸುವುದರೊಂದಿಗೆ ಅರ್ಥಪೂರ್ಣವಾಗಿಸುವುದು.**

**ದಿನಾಂಕ: 30.5.2018: ಸೇತುಬಂಧ:** ಶಿಕ್ಷಕರ ಬಳಿ ಕಳೆದ ಸಾಲಿನಲ್ಲಿ ನಡೆಸಿದ ಎಫ್.ಎ. ಮತ್ತು ಎಸ್.ಎ. ದತ್ತಾಂಶಗಳು ಲಭ್ಯವಿರುತ್ತವೆ. ಇವುಗಳನ್ನು ಅವಲೋಕಿಸಿ ವಿಶ್ಲೇಷಿಸುವುದು. ಇದಕ್ಕೆ ಪೂರಕವಾಗಿ ನೈದಾನಿಕ ಪರೀಕ್ಷೆ ಹಮ್ಮಿಕೊಂಡು ಫಲಿತಾಂಶ ವಿಶ್ಲೇಷಿಸಬೇಕು. ಈ ದತ್ತಾಂಶ ಮತ್ತು ಇಲಾಖೆಯಿಂದ ಸರಬರಾಜಾದ ಕಲಿಕಾ ಫಲಿತಾಂಶಗಳನ್ನಾಧರಿಸಿ (Learning Out come) ಶಾಲಾ ಶೈಕ್ಷಣಿಕ ಯೋಜನೆ (SAP) ತಯಾರಿಸುವುದು. ಎನ್.ಎ.ಎಸ್. ಮತ್ತು ಸಿ.ಎಸ್.ಎ.ಎಸ್. ವಿಶ್ಲೇಷಣೆ ಆಧಾರದಲ್ಲಿ ವಿದ್ಯಾರ್ಥಿವಾರು ಕಲಿಕಾಕೊರತೆ ಸಿದ್ಧಪಡಿಸಿಕೊಂಡು ಸೇತುಬಂಧ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಈ ಎಲ್ಲಾ ಅಂಶಗಳನ್ನು ಬಳಸಿಕೊಂಡು ಮಗುವಿನ ಕಲಿಕಾ ಪ್ರಗತಿ, ಕಲಿಕಾ ಅಂತರ ಗುರುತಿಸಿ ಮಕ್ಕಳಿಗೆ ಪ್ರತ್ಯೇಕ ಪರಿಹಾರಾತ್ಮಕ ಚಟುವಟಿಕೆ ಅನುಕೂಲಿಸುವುದು. ಇದಕ್ಕಾಗಿ ಜೂನ್ ತಿಂಗಳಲ್ಲಿ ದಿನದ ಎರಡು ಅವಧಿಗಳನ್ನು ಮಾತ್ರ ವಿನಿಯೋಗಿಸುವುದು. ಸೇತುಬಂಧದ ಹೆಸರಿನಲ್ಲಿ ಮಗುವಿನ ಕಲಿಕಾ ಸಮಯದ ಎರಡು ಅವಧಿಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಬೇಕೇ ಹೊರತು ಕಲಿಕಾ ಸಮಯ ವ್ಯರ್ಥವಾಗಬಾರದು. ಪರಿಹಾರ ಬೋಧನೆ ಅನುಷ್ಠಾನ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಪೆಡಗೋಗಿ/ಪೂರಕ ಬೋಧನೆ/2017-18 ದಿ:19.2.2018ರ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅವಲೋಕಿಸುವುದು.



**ಜೂನ್-2018 ರ ಮಾಹೆ : ದಿನಾಂಕ: 05.06.2018 : ವಿಶ್ವ ಪರಿಸರ ದಿನ ಹಾಗೂ ವಿವಿಧ ಸಂಘಗಳ ಉದ್ಘಾಟನೆ–** ಕ್ರೀಡಾ ಸಂಘ, ಇಕೋ ಕ್ಲಬ್, ವಿಜ್ಞಾನ ಸಂಘ, ಚುನಾವಣಾ ಸಾಕ್ಷರತಾ ಕ್ಲಬ್ ಹಾಗೂ ಇತರೆ ಎಲ್ಲಾ ಸಂಘಗಳ ಉದ್ಘಾಟನೆ ಮತ್ತು ಶಾಲಾ ಅಂಗಳದಲ್ಲಿ ಗಿಡ ನೆಡುವ ಕಾರ್ಯಕ್ರಮ. ಸ್ವಚ್ಛ ಭಾರತ, ಸ್ವಚ್ಛವಿದ್ಯಾಲಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅರಿವು ಮೂಡಿಸುವುದು. ಹಾಗು ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಶಾಲೆಯನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನೊಂದಾಯಿಸುವುದು.

**ದಿನಾಂಕ: 11.06.2018: ದಾಖಲಾತಿ ಆಂದೋಲನ–** 1. ದಿನಾಂಕ: 10.06.2018 ರವರೆಗಿನ ದಾಖಲಾತಿ ಪ್ರಕ್ರಿಯೆಯನ್ನು ಆಧರಿಸಿ, ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿ ಶಾಲೆಗೆ ಬಾರದಿರುವ ಮಕ್ಕಳು, ಶಾಲೆಗೆ ದಾಖಲಾಗದಿರುವ ಅರ್ಹ ವಯಸ್ಸಿನ ಮಕ್ಕಳ ಮತ್ತು ಶಾಲೆ ಬಿಟ್ಟ ಮಕ್ಕಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. 2. ಶಿಕ್ಷಕರು, ಮುಖ್ಯಶಿಕ್ಷಕರು, ಎಸ್.ಡಿ.ಎಂ.ಸಿ ಸಹಯೋಗದೊಂದಿಗೆ ಇಂತಹ ಮಕ್ಕಳ ಮನೆಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಶಾಲೆಗೆ ದಾಖಲಿಸುವುದು 3. ಶಾಲಾ ಪ್ರಾರಂಭದ ಅವಧಿಗೆ ಮುಂಚಿತವಾಗಿ ಅದೇ ದಿನ ಜಾಥಾ, ಘೋಷಣೆ ಮತ್ತು ಭಿತ್ತಿಪತ್ರಗಳನ್ನು ಹಂಚುವ ಮೂಲಕ ಶಾಲಾ ಶಿಕ್ಷಣದ ಪ್ರಾಮುಖ್ಯತೆ ತಿಳಿಸುವುದು ಹಾಗೂ ದಾಖಲಾತಿ ಅಂದೋಲನವನ್ನು ಅರ್ಥಪೂರ್ಣಗೊಳಿಸುವುದು.

**ದಿನಾಂಕ: 12.06.2018: ಬಾಲಕಾರ್ಮಿಕ ವಿರೋಧಿ ದಿನಾಚರಣೆ:** ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 18.06.2018 ಮತ್ತು 19.06.2018: ಶಾಲಾ ಮಟ್ಟದ ಕ್ರೀಡಾಕೂಟ:** 18.06.2018ರ ಮಧ್ಯಾಹ್ನ ಎರಡು ಅವಧಿಗಳಲ್ಲಿ ವೈಯಕ್ತಿಕ ಆಟೋಟ ಮತ್ತು 19.06.2018ರ ಮಧ್ಯಾಹ್ನ ಗುಂಪು ಆಟಗಳ ಚಟುವಟಿಕೆ ಹಮ್ಮಿಕೊಳ್ಳುವುದು.

**ದಿನಾಂಕ: 21.06.2018: ವಿಶ್ವ ಯೋಗ ದಿನಾಚರಣೆ:** ಪ್ರಾರ್ಥನಾ ಸಮಯದಲ್ಲಿ ಯೋಗದ ಪ್ರಾಮುಖ್ಯತೆ ತಿಳಿಸಿ, ಇಪ್ಪತ್ತು ನಿಮಿಷದ ಯೋಗಾಸನ ಮಾಡಿಸುವುದು. (ಮಕ್ಕಳು ಬಿಸಿಲು/ಮಳೆಯಲ್ಲಿ ಇರದಂತೆ ನೋಡಿಕೊಳ್ಳುವುದು)

**ದಿನಾಂಕ: 23.06.2018: ಶಾಲಾಹಂತದ ಪ್ರತಿಭಾಕಾರಂಜಿ:** ಇಲಾಖಾ ಮಾರ್ಗಸೂಚಿಯನ್ವಯ ವಿದ್ಯಾರ್ಥಿಗಳಲ್ಲಿನ ಅಂತರ್ಗತ ಪ್ರತಿಭೆಯನ್ನು ಗುರುತಿಸಿ, ಮಗುವಿನ ಪ್ರತಿಭೆಗೆ ಅನುಗುಣವಾಗಿ ಸ್ಪರ್ಧೆಗಳನ್ನು ನಡೆಸುವುದು. ಆಯ್ಕೆಯಾದ ವಿದ್ಯಾರ್ಥಿಗಳನ್ನು ಮುಂದಿನ ಹಂತದ ಸ್ಪರ್ಧೆಗಳಿಗೆ ಅಣಿಗೊಳಿಸುವುದು.

**ದಿನಾಂಕ: 27.06.2018: ಶಾಲಾ ಹಂತದ ವಿಜ್ಞಾನ ನಾಟಕ, ವಸ್ತು ಪ್ರದರ್ಶನ** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು.

**ಜುಲೈ ಮಾಹೆ: ದಿನಾಂಕ: 05.07.2018: ಹೋಬಳಿ ಮಟ್ಟದ ಕ್ರೀಡಾ ಕೂಟ:** ಹೋಬಳಿ ಮಟ್ಟದ ಕ್ರೀಡಾಕೂಟವನ್ನು 05.07.2018ರ ಒಳಗೆ ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು.

**ದಿನಾಂಕ: 16.07.2018 ರಿಂದ 18.07.2018: ಮೊದಲನೇ ರೂಪಣಾತ್ಮಕ ಮೌಲ್ಯಮಾಪನ:** ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ಮೂರು ದಿನಗಳಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು.

**ದಿನಾಂಕ: 24.07.2018: ತಾಲ್ಲೂಕು ಮಟ್ಟದ ಕ್ರೀಡಾಕೂಟ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು.

**ದಿನಾಂಕ: 27.07.2018: ತಾಲ್ಲೂಕು ಹಂತದ ವಿಜ್ಞಾನ ನಾಟಕ, ವಸ್ತು ಪ್ರದರ್ಶನ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು.

**ಆಗಸ್ಟ್ ಮಾಹೆ: ದಿನಾಂಕ: 10.08.2018: ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ–** 1. ನಿಗದಿಪಡಿಸಿರುವ ದಿನಾಂಕದೊಳಗೆ ಈ ಚಟುವಟಿಕೆಯನ್ನು ನಿರ್ವಹಿಸುವುದು 2. ತಾಲ್ಲೂಕು ಹಂತಕ್ಕೆ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸುವುದರಿಂದ, ಈ ಚಟುವಟಿಕೆಗೆ ಅಗತ್ಯವಿರುವ ಪೂರ್ವಸಿದ್ಧತೆಯನ್ನು ಅತ್ಯಂತ ಜಾಗರೂಕತೆಯಿಂದ ಸಮರ್ಪಕವಾಗಿ ಯೋಜಿಸುವುದು 3. ಕಾರ್ಯಕ್ರಮದ ಸ್ಥಳ ಆಯ್ಕೆ, ನಿರ್ಣಾಯಕರ ಆಯ್ಕೆ, ವಿವಿಧ ಸಮಿತಿಗಳ ರಚನೆ, ಕಾರ್ಯಹಂಚಿಕೆ ಶಾಲೆಗಳಿಂದ ಮಕ್ಕಳ ಪಟ್ಟಿ ಸ್ವೀಕೃತಿ, ಇವುಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಳ್ಳುವುದು 4. ಇಲಾಖಾ ಮಾರ್ಗಸೂಚಿಯನ್ವಯ ಯಾವುದೇ ಲೋಪವಿಲ್ಲದೆ ಕಾರ್ಯಕ್ರಮವನ್ನು ನಡೆಸುವುದು.

**ದಿನಾಂಕ: 15.08.2018: ಸ್ವಾತಂತ್ರ್ಯ ದಿನಾಚರಣೆ:** ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ:21.08.2018: ಜಿಲ್ಲಾಮಟ್ಟದ ಕ್ರೀಡಾಕೂಟ:** ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದು.

**ದಿನಾಂಕ: 24.08.2018: ಜಿಲ್ಲಾಹಂತದ ವಿಜ್ಞಾನ ನಾಟಕ, ವಸ್ತು ಪ್ರದರ್ಶನ:** ನಿಗದಿತ ದಿನಾಂಕದ ಒಳಗೆ ಇಲಾಖಾ ಮಾರ್ಗಸೂಚಿಯನ್ವಯ ಯಾವುದೇ ಲೋಪವಿಲ್ಲದೆ ಕಾರ್ಯಕ್ರಮಗಳನ್ನು ನಡೆಸುವುದು.

**ದಿನಾಂಕ: 27.08.2018 ರಿಂದ 29.08.2018 : ಎರಡನೇ ರೂಪಣಾತ್ಮಕ ಮೌಲ್ಯಮಾಪನ:** ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ಮೂರು ದಿನಗಳಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು.

**ದಿನಾಂಕ: 29.08.2018: ರಾಷ್ಟ್ರೀಯಕ್ರೀಡಾದಿನ:** ಪ್ರಾರ್ಥನಾ ಸಮಯವನ್ನು ಬಳಸಿಕೊಂಡು ರಾಷ್ಟ್ರೀಯ ಕ್ರೀಡಾದಿನದ ಮಹತ್ವ ತಿಳಿಸುವುದು.

**ಸೆಪ್ಟೆಂಬರ್ ಮಾಹೆ: ದಿನಾಂಕ: 05.09.2018: ಶಿಕ್ಷಕರ ದಿನಾಚರಣೆ** ಶಿಕ್ಷಕರ ದಿನಾಚರಣೆಯನ್ನು ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 07.09.2018 ಮತ್ತು 08.09.2018: ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ:** ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿಗೆ ನೀಡಿರುವ ಸೂಚನೆಗಳನ್ನು ಪರಿಗಣಿಸಿ ಜಿಲ್ಲಾ ಹಂತದ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರ್ವಹಿಸುವುದು. ಕಲೋತ್ಸವಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ವಯ ಯಾವುದೇ ಗೊಂದಲಕ್ಕೆ ಎಡೆಮಾಡಿಕೊಡದೆ ನಿಗದಿತ ದಿನಾಂಕದೊಳಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**ದಿನಾಂಕ: 08.09.2018: ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ:** ರಾಷ್ಟ್ರ ಮತ್ತು ರಾಜ್ಯಹಂತದ ಸಾಕ್ಷರತಾ ಪ್ರಮಾಣದ ಬಗ್ಗೆ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವ ಮೂಲಕ ಸಾಕ್ಷರತೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು. ವಿದ್ಯಾರ್ಥಿಗಳಿಂದ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವ ಯೋಜನೆ ರೂಪಿಸುವುದು.

**ದಿನಾಂಕ: 15.09.2018: ಸರ್.ಎಂ. ವಿಶ್ವೇಶ್ವರಯ್ಯರವರ ದಿನಾಚರಣೆ:** ವಿಶ್ವೇಶ್ವರಯ್ಯನವರು ನಾಡಿಗೆ ನೀಡಿದ ಕೊಡುಗೆ ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ಮಕ್ಕಳಿಗೆ ತಿಳಿಸುವುದು.

**ದಿನಾಂಕ: 24.09.2018 ರಿಂದ 29.08.2018 : ಸಂಕಲನಾತ್ಮಕ ಮೌಲ್ಯಮಾಪನ:** ಹತ್ತನೇ ತರಗತಿಗೆ ಸಂಕಲನಾತ್ಮಕ ಮೌಲ್ಯಮಾಪನ.

**ಅಕ್ಟೋಬರ್ ಮಾಹೆ: ದಿನಾಂಕ: 02.10.2018: ಗಾಂಧೀಜಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿ:** ಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಸರಳ ಜೀವನದ ಪರಿಚಯ, ಶ್ರಮದಾನ ಹಾಗೂ ಭಜನೆಗಳ ಮೂಲಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 4.10.2018 ರಿಂದ 6.10.2018: ಸಂಕಲನಾತ್ಮಕ ಮೌಲ್ಯಮಾಪನ:** (4 ರಿಂದ 9ನೇ ತರಗತಿ) ಮೂರು ದಿನದ ಸಂಕಲನಾತ್ಮಕ ಮೌಲ್ಯಮಾಪನ.

**07.10.2018 ರಿಂದ 21.10.2018ರವರೆಗೆ ಮಧ್ಯಂತರ ರಜೆ :**

**ದಿನಾಂಕ : 7.10.2018 : ರಾಜ್ಯಮಟ್ಟದ ಪ್ರತಿಭಾ ಕಾರಂಜಿ:** 10.10.18 ರೊಳಗೆ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಪೂರ್ಣಗೊಳಿಸುವುದು.

**ದಿನಾಂಕ : 24.10.2018 : ಸಮುದಾಯದತ್ತ ಶಾಲೆ [ಪ್ರಾಥಮಿಕ]**
**ದಿನಾಂಕ : 25.10.2018 : ಸಮುದಾಯದತ್ತ ಶಾಲೆ [ಪ್ರೌಢ]**

1. ಸಂಕಲನಾತ್ಮಕ ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಸಿದ್ಧಪಡಿಸಿಕೊಳ್ಳುವುದು. 2. ಶಾಲೆಯ ಪ್ರತಿ ವಿದ್ಯಾರ್ಥಿಯ ಕೃತಿ ಸಂಪುಟ (Child Profile)ವನ್ನು ಸಿದ್ಧಪಡಿಸಿಕೊಳ್ಳುವುದು. 3. ಮುಖ್ಯ ಶಿಕ್ಷಕರು ಸಮುದಾಯದತ್ತ ಶಾಲೆ ದಿನಾಂಕದ ಬಗ್ಗೆ ಹಾಗೂ ಕಾರ್ಯಕ್ರಮಕ್ಕೆ ಹಾಜರಾಗುವಂತೆ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರಿಗೆ ಸಾಕಷ್ಟು ಮುಂಚಿತವಾಗಿ ಜ್ಞಾಪನವನ್ನು ನೀಡುವುದು. 4. ಆಯಾ ತರಗತಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪೋಷಕರ ಮನವೊಲಿಸಿ ತಪ್ಪದೇ ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರೇರೇಪಿಸುವುದು 5. ಶಿಕ್ಷಕರು, ಪೋಷಕರಿಗೆ ಮಕ್ಕಳ ಕೃತಿ ಸಂಪುಟವನ್ನು ತೋರಿಸಿ, ಅವರ ಕಲಿಕಾ ಪ್ರಗತಿಯನ್ನು ವಿವರಿಸುವುದು. ಮನೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಲಿಕಾ ಪರಿಸರವನ್ನು ಒದಗಿಸಿಕೊಡುವಂತೆ ತಿಳಿಸುವುದು 6. ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ಎಸ್.ಡಿ.ಎಂ.ಸಿ. ಸಮ್ಮುಖದಲ್ಲಿ ಶಾಲೆಯ ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶದ ಬಗ್ಗೆ ಚರ್ಚಿಸುವುದು. ಫಲಿತಾಂಶವನ್ನು ಆಧರಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಳ್ಳುವುದು 7. ವಿಶೇಷವಾಗಿ ಹತ್ತನೆ ತರಗತಿಗೆ ಸಂಬಂಧಿಸಿದಂತೆ ಎಲ್ಲಾ ಮಕ್ಕಳ ಪೋಷಕರು ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು. ಈ ಪೋಷಕರ ಪ್ರತ್ಯೇಕ ಸಭೆ ನಡೆಸಿ ಮಕ್ಕಳ ಕಲಿಕೆಗೆ ಪೂರಕವಾದ ಕಲಿಕಾ ವಾತಾವರಣವನ್ನು ಮನೆಯಲ್ಲಿ ಒದಗಿಸುವಂತೆ ಮನವೊಲಿಸುವುದು, ಸೂಕ್ತ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಅವಧಿ ನಿರ್ವಹಣೆಗೆ ಅವಕಾಶ ಕಲ್ಪಿಸುವುದು.

**ದಿನಾಂಕ: 30.10.2018: ವಿಭಾಗಮಟ್ಟದ ಕ್ರೀಡಾಕೂಟ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು.

**ದಿನಾಂಕ: 31.10.2018: ವಿಭಾಗಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು.

**ದಿನಾಂಕ: 31.10.2018: ರಾಷ್ಟ್ರೀಯ ಸಂಕಲ್ಪ ದಿನ :** ಇಲಾಖಾ ಮಾರ್ಗಸೂಚಿಯಂತೆ ಕ್ರಮವಹಿಸುವುದು.

**ನವೆಂಬರ್ ಮಾಹೆ: 01.11.2018: ಕನ್ನಡ ರಾಜ್ಯೋತ್ಸವ:** ಕನ್ನಡ ರಾಜ್ಯೋತ್ಸವವನ್ನು ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 06.11.2018: ಕನಕದಾಸ ಜಯಂತಿ:** ಕನಕದಾಸರ ಜಯಂತಿಯನ್ನು ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 10.11.2018: ರಾಜ್ಯಮಟ್ಟದ ಕ್ರೀಡಾಕೂಟ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು.

**ದಿನಾಂಕ: 11.11.2018: ರಾಷ್ಟ್ರೀಯ ಶಿಕ್ಷಣ ದಿನ:** ಮೌಲಾನಾ ಅಬ್ದುಲ್ ಕಲಾಂ ಆಜಾದ್ ಜಯಂತಿ ಆಚರಣೆ.

**ದಿನಾಂಕ: 13.11.2018: ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಮತ್ತು ನಾಟಕ ಸ್ಪರ್ಧೆ:** ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು.

**ದಿನಾಂಕ: 14.11.2018: ಮಕ್ಕಳ ದಿನಾಚರಣೆ:** ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು. ಮಕ್ಕಳ ಅಭಿವ್ಯಕ್ತಿ ಹಾಗೂ ಭಾಗವಹಿಸುವಿಕೆಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

**ದಿನಾಂಕ: 19.11.2018: ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ:** ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 26.11.2018: ಸಂವಿಧಾನ ದಿನಾಚರಣೆ:** ಸಂವಿಧಾನದ ಪ್ರಾಮುಖ್ಯತೆ ಮತ್ತು ನಾಗರಿಕರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು.

**ಡಿಸೆಂಬರ್ ಮಾಹೆ: ದಿನಾಂಕ: 01.12.2018: ವಿಶ್ವ ಏಡ್ಸ್ ದಿನಾಚರಣೆ:** ವಿಶ್ವ ಏಡ್ಸ್ ದಿನಾಚರಣೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.

**ದಿನಾಂಕ: 03.12.2018: ವಿಶ್ವ ವಿಕಲಚೇತನರ ದಿನಾಚರಣೆ:** ಸಮನ್ವಯ ಶಿಕ್ಷಣದ ಪರಿಕಲ್ಪನೆಯ ಅರಿವು ಮೂಡಿಸುವುದು.

**ದಿನಾಂಕ: 06.12.2018 ರಿಂದ 08.12.2018: ಮೂರನೇ ರೂಪಣಾತ್ಮಕ ಮೌಲ್ಯಮಾಪನ:** ರೂಪಣಾತ್ಮಕ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ಮೂರು ದಿನಗಳಲ್ಲಿ ಈ ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಳಿಸುವುದು.

**ದಿನಾಂಕ: 22.12.2018: ರಾಷ್ಟ್ರೀಯ ಗಣಿತ ದಿನ:** ಮೆಟ್ರಿಕ್ ಮೇಳ, ನಿತ್ಯ ಜೀವನದಲ್ಲಿ ಗಣಿತದ ಬಳಕೆ, ಗಣಿತ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಇವೆ ಮುಂತಾದ ವಿಷಯಗಳ ಬಗ್ಗೆ ವಿಚಾರಗೋಷ್ಠಿ, ಚರ್ಚಾಸ್ಪರ್ಧೆಗಳನ್ನು ಶಾಲೆಯಲ್ಲಿ ಏರ್ಪಡಿಸಿ ಈ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ : 24.12.2018: ಅಣಕು ಸಂಸತ್ತು ಸ್ಪರ್ಧೆ:** ಅಣಕು ಸಂಸತ್ತಿನ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ನಿಟ್ಟಿನಲ್ಲಿ ಶಾಲಾ ಹಂತದಲ್ಲಿ ಅಣುಕು ಸಂಸತ್ತು ಸ್ಪರ್ಧೆ ಏರ್ಪಡಿಸುವುದು.

**ಜನವರಿ ಮಾಹೆ: ದಿನಾಂಕ: 03.01.2019: ಸಾವಿತ್ರಿಬಾಯಿ ಫುಲೆ ಜಯಂತಿ:** ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆಯವರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.

**ದಿನಾಂಕ: 12.01.2019: ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ, ರಾಷ್ಟ್ರೀಯ ಯುವ ದಿನಾಚರಣೆ:** ದೇಶದ ಅಭಿವೃದ್ಧಿಯಲ್ಲಿ ಯುವಪೀಳಿಗೆಯ ಪಾತ್ರದ ಮಹತ್ವದ ಬಗ್ಗೆ ತಿಳಿಸುವುದು.

**ದಿನಾಂಕ: 25.01.2019: ರಾಷ್ಟ್ರೀಯ ಮತದಾರರ ದಿನ:** ಇ.ಎಲ್.ಸಿ ಕ್ಲಬ್‌ಗಳ ಮೂಲಕ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸುವುದು.

**ದಿನಾಂಕ: 26.01.2019: ಗಣರಾಜ್ಯ ದಿನಾಚರಣೆ:** ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 30.01.2019: ಹುತಾತ್ಮರ ದಿನಾಚರಣೆ:** ಗಾಂಧೀಜಿಯವರ ಉದಾತ್ತ ಧ್ಯೇಯದ ಬಗ್ಗೆ ತಿಳಿಸುವುದು.

**ಫೆಬ್ರವರಿ ಮಾಹೆ:** ದಿನಾಂಕ:7.02.2019 ರಿಂದ 9.02.2019: **ನಾಲ್ಕನೇ ರೂಪಣಾತ್ಮಕ ಮೌಲ್ಯಮಾಪನ :** ರೂಪಣಾತ್ಮಕ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ಮೂರು ದಿನಗಳಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು.

**ದಿನಾಂಕ: 28.02.2019: ರಾಷ್ಟ್ರೀಯ ವಿಜ್ಞಾನ ದಿನಾಚರಣೆ:** ಸಿ.ವಿ.ರಾಮನ್ ಅವರನ್ನು ಒಳಗೊಂಡಂತೆ ಭಾರತದ ವಿಜ್ಞಾನಿಗಳು ವಿಜ್ಞಾನ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು. ಈ ದಿನದಂದು ಶಾಲೆಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ವಿಜ್ಞಾನದ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವುದು.

**ಮಾರ್ಚ್ ಮಾಹೆ: ದಿನಾಂಕ: 08.03.2019: ವಿಶ್ವ ಮಹಿಳಾ ದಿನಾಚರಣೆ:** ಇದರ ಔಚಿತ್ಯದ ಬಗ್ಗೆ ಮಕ್ಕಳಿಗೆ ತಿಳಿಸುವುದು.

**ಏಪ್ರಿಲ್ ಮಾಹೆ: ದಿನಾಂಕ: 01.04.2019 ರಿಂದ 08.04.2019: ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ (4 ರಿಂದ 9ನೇ ತರಗತಿ):** ಆರು ದಿನಗಳ ಅವಧಿಯಲ್ಲಿ ಸಂಕಲನಾತ್ಮಕ ಮೌಲ್ಯಮಾಪನ ಪೂರ್ಣಗೊಳಿಸಿ ಸಮುದಾಯದತ್ತ ಶಾಲೆ ವೇಳೆಗೆ ಸಂಬಂಧಿಸಿದ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳುವುದು.

**ದಿನಾಂಕ: 07.04.2019: ವಿಶ್ವ ಆರೋಗ್ಯ ದಿನಾಚರಣೆ:** ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು.

**ದಿನಾಂಕ: 09.04.2019:ಎರಡನೆಯ ಸಮುದಾಯದತ್ತ ಶಾಲೆ (ಪ್ರಾಥಮಿಕ)**

**ದಿನಾಂಕ: 10.04.2019: ಎರಡನೆಯ ಸಮುದಾಯದತ್ತ ಶಾಲೆ (ಪ್ರೌಢ):** 1. ಮಕ್ಕಳ ಫಲಿತಾಂಶ ಪ್ರಕಟಿಸುವುದು 2. ಮುಂದಿನ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ದಿನದಿಂದಲೇ ಹಾಜರಾಗುವಂತೆ ಪ್ರೇರೇಪಿಸುವುದು 3. ಶಾಲಾ ಪ್ರಾರಂಭದ ದಿನದಿಂದಲೇ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುವ ಬಗ್ಗೆ ಪೋಷಕರಿಗೆ ತಿಳಿಸುವುದು 4. ರಜೆ ಅವಧಿಯಲ್ಲಿ ದಾಖಲಾತಿ ಪ್ರಕ್ರಿಯೆ ನಡೆಯುವ ಬಗ್ಗೆ ತಿಳಿಸುವುದು 5. ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸುವುದು. ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು, ಶಾಲಾ ಶೈಕ್ಷಣಿಕ ಯೋಜನೆಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆಯುವುದು.

**ದಿನಾಂಕ: 11. 04. 2019 ರಿಂದ 26. 05. 2019 ಬೇಸಿಗೆ ರಜೆ**

**ದಿನಾಂಕ : 14.04.2019: ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆ:** ಶಾಲೆಗಳಲ್ಲಿ ಕಡ್ಡಾಯವಾಗಿ ಅರ್ಥಪೂರ್ಣವಾಗಿ ಆಚರಿಸುವುದು.

**ಸೂಚನೆಗಳು:** 1. 2018–19ನೇ ಸಾಲಿನ ವಾರ್ಷಿಕ ಕಾರ್ಯಸೂಚಿಯನ್ನು ಶಾಲಾಹಂತದಲ್ಲಿ ಮಕ್ಕಳಿಗೆ ಗರಿಷ್ಠ ಕಲಿಕಾ ಅವಕಾಶದ ಸಮಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಿದ್ಧಪಡಿಸಿದೆ. ಮುಖ್ಯಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಯವರು ಇದನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದಲ್ಲಿ ಮಾತ್ರ ಇದರ ಯಶಸ್ಸು ಸಾಧ್ಯವಾಗುತ್ತದೆ.

2. ಪ್ರತಿಭಾ ಕಾರಂಜಿ, ಕ್ರೀಡಾಕೂಟ, ವಿವಿಧ ಸಂಘಗಳ ಅಡಿಯಲ್ಲಿ ಹಮ್ಮಿಕೊಳ್ಳುವಂತ ಕಾರ್ಯಕ್ರಮಗಳನ್ನು ವಿವಿಧ ಹಂತಗಳಲ್ಲಿ ಹಮ್ಮಿಕೊಳ್ಳುವ ಸಂದರ್ಭದಲ್ಲಿ ಮಕ್ಕಳ ಕಲಿಕಾ ಅವಧಿಗೆ ಚ್ಯುತಿಬಾರದಂತಿ ಎಚ್ಚರಿಕೆಯಿಂದ ಸೂಕ್ತ ಯೋಜನೆಯೊಂದಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

3. ವಿವಿಧ ದಿನಾಚರಣೆಗಳ ಆಚರಣೆಯನ್ನು ಪ್ರಾರ್ಥನಾ ಸಮಯದಲ್ಲಿ ಅದರ ಮಹತ್ವವನ್ನು ತಿಳಿಸುವುದರೊಂದಿಗೆ ಆಚರಿಸುವುದು. ಅವಶ್ಯಕತೆ ಇದ್ದಲ್ಲಿ ಆಯಾ ವಿಷಯಗಳ ಬೋಧನಾ ಅವಧಿಯಲ್ಲಿ ಸಹಸಂಬಂಧ ಕಲ್ಪಿಸಿ ಹೆಚ್ಚಿನ ಮಾಹಿತಿ ತಿಳಿಸುವುದು. ಹಾಗೂ ಕ್ವಿಜ್ ಅನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಏರ್ಪಡಿಸುವುದು ಹಾಗೂ ಇದಕ್ಕಾಗಿ ಇಡೀ ದಿನ ಬಳಸದಂತೆ ಎಚ್ಚರಿಕೆ ವಹಿಸುವುದು.

4. ರೂಪಣಾತ್ಮಕ ಮೌಲ್ಯಮಾಪನವನ್ನು ಆಯಾ ವಿಷಯ ಬೋಧನೆ ಅವಧಿಯಲ್ಲಿಯೇ ನಿರ್ವಹಿಸುವುದು. ಸಂಕಲನಾತ್ಮಕ ಮೌಲ್ಯಮಾಪನವನ್ನು ನಿಗದಿತ ದಿನಗಳಂದು ಕಡ್ಡಾಯವಾಗಿ ನಡೆಸುವುದು. ಮೌಲ್ಯಮಾಪನ ದಿನಗಳ ಸಮರ್ಪಕ ನಿರ್ವಹಣೆ ಆಗುವಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

5. ಶಿಕ್ಷಕರ ದಿನಾಚರಣೆಯನ್ನು ವಿವಿಧ ಹಂತಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ನಡೆಸುತ್ತಿರುವುದರಿಂದ ಕಲಿಕಾ ದಿನಗಳು ಕಡಿಮೆಯಾಗಿರುವುದನ್ನು ಗಮನಿಸಿದೆ. ಈ ಹಿನ್ನೆಲೆಯಲ್ಲಿ ಇದನ್ನು ಸಾಧ್ಯವಾದಷ್ಟು ದಿನಾಂಕ: 05.09.2018 ರಂದೇ ಎಲ್ಲಾ ಹಂತಗಳಲ್ಲೂ ಆಚರಿಸಲು ಸಂಬಂಧಪಟ್ಟವರು ಕ್ರಮವಹಿಸುವುದು.

6. ಕಲಿಕಾ ಅವಕಾಶದ ಸಮಯ ಹೆಚ್ಚಿಸಲು ದಿನದ ಕಲಿಕಾ ಚಟುವಟಿಕೆಗಳ ನಿರ್ವಹಣೆಗೆ ಅಗತ್ಯವಹಿಸಬೇಕಾದ ಕ್ರಮಗಳು.

* ಪ್ರಾರ್ಥನಾ ಸಮಯವನ್ನು 20 ನಿಮಿಷಕ್ಕೆ ಸೀಮಿತಗೊಳಿಸಿದ್ದು, ಅವಧಿ ಮೀರದಂತೆ ಯೋಜಿತ ಚಟುವಟಿಕೆಗಳನ್ನು ನಿರ್ವಹಿಸುವುದು. (ಪತ್ರಿಕಾವಾಚನ, ಸುಭಾಷಿತ, ನಾಡಗೀತೆ, ರಾಷ್ಟ್ರಗೀತೆ)

* ಹಾಲು ವಿತರಣೆಗೆ ಕಲಿಕಾ ಅವಧಿ ಬಳಕೆಯಾಗುತ್ತಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಹಾಲು ವಿತರಣೆ, ಮಧ್ಯಾಹ್ನದ ಉಪಹಾರ ಯೋಜನೆಗೆ ಕಲಿಕಾ ಅವಧಿ ಬಳಸದಂತೆ ಶಾಲಾ ಹಂತದಲ್ಲಿ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.

* ಕಡೆಯ ಕಲಿಕಾ ಅವಧಿಯಲ್ಲಿ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸದೆ ಆಟೋಟಗಳಲ್ಲಿ ತೊಡಗಿಸಿಕೊಂಡಿರುವುದು ಗಮನಿಸಿದೆ. ಪ್ರತಿ ದಿನದ ಕಡೆಯ ಕಲಿಕಾ ಅವಧಿ ಈ ರೀತಿ ವ್ಯರ್ಥವಾದಲ್ಲಿ ಒಟ್ಟಾರೆ ಕಲಿಕಾ ಅವಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯರ್ಥವಾಗುತ್ತವೆ. ಈ ರೀತಿ ಆಗದಂತೆ ಕಡೆಯ ಕಲಿಕಾ ಅವಧಿಯನ್ನು ಸಮರ್ಪಕವಾಗಿ ವೇಳಾಪಟ್ಟಿಯನ್ವಯ ಬಳಸುವುದು.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

